ಮಾಡಿಕೊಂಡು, ವಿಜಯನಗರದ ವೀರಪುತ್ರಿಯರಾಗಿ ಮೆರೆಯುತ್ತಿದ್ದ ಕಾಲದಲ್ಲಿ, ನಮ್ಮ ಪುಟ್ಟ ಟೇಪುರೆಕಾರ್ಡರು ನಮ್ಮ ತಾರುಣ್ಯದ ಕನಸುಗಳಿಗೆ, ಮಳೆಯ ಹಾಡುಗಳ ಸಾಂಗತ್ಯನೀಡಿ, ಸುಮ್ಮಾನದ ಘಳಿಗೆಗಳನ್ನು ಇವತ್ತಿಗೂ ನೆನೆದು ಪುಳಕಗೊಳ್ಳುವಷ್ಟು ತೀವ್ರವಾಗಿ ಕಾಪಿಟ್ಟಿತ್ತು. ಭರ್ತಿ ಒಂದು ಕೆಸೆಟ್ಟಿನ ತುಂಬವೂ ಮಳೆಯ, ರೊಮ್ಯಾಂಟಿಕ್ ಹಾಡುಗಳ ರಸದೌತಣ. 'ರಿಮಝಿಮ ಗಿರೆ ಸಾವನ್ನಿಂದ ಹಿಡಿದು, ಕ್ಯಾ ಮೌಸಮ್ ಹೈ... ಏ ದೀವಾನೇ ದಿಲ್, ಮೇರಾ ಕುಛ್ ಸಾಮಾನ್ ತುಮ್ಹಾರೇ ಪಾಸ್ ಪಡಾ ಹೈ, ಬಾದಲ್ ಕ್ಯೊಂ ಘರಜತಾ ಹೈ, ಮೌಸಮ್ ಸುಹಾನೇ ಆಗಯೇ'ವರೆಗೂ, ಎಷ್ಟೊಂದು ಹಾಡುಗಳಿದ್ದವು. ಉಳಿದವು ನೆನಪಿಗೇ ಬರುತ್ತಿಲ್ಲ. ಇದು ನಿಜಕ್ಕೂ ಬರಗಾಲವೇ ಸೈ!

ಮಿಕ್ಕಿದಂತೆ 'ಇಂದು ಮುಂಜಾವಿನಲಿ ತುಂತುರಿನಾ ಸೋನೇಮಳೆ...' ಹಾಡನ್ನು ಕೇಳಿಸಿಕೊಳ್ಳುತ್ತ ಒಮ್ಮೆ ಕಾಡುದಾರಿಯಲ್ಲಿ ಸಾಗಿಹೋಗುತ್ತಿರಬೇಕಾದರೆ, ಅಚಾನಕ ಕಾರು ನಿಲಿಸಿದ ಗಂಡ ಎಲ್ಲ ದೀಪಗಳನ್ನು ಆರಿಸಿ, ಸುಮ್ಮನೆ ಕುಳಿತ ಘಳಿಗೆಯಲ್ಲಿ, ಕಣ್ಣಮುಂದೆ ಸುರಿದ ಕಪ್ಪುಗತ್ತಲು ಭಯವನ್ನು ಮೂಡಿಸುವ ಬದಲಾಗಿ, ಕಣ್ಣಿಲ್ಲದವರ ಪಾಡು ಕಣ್ಣಮುಂದೆ ಬಂದು, ಮನಸ್ಸು ಮೂಕವಾಗಿತ್ತು. ಆಲೋಚನೆಗಳ ಮಳೆ ದಬಾಯಿಸಿ ಸುರಿಯುತ್ತಿರುವಾಗ, ಮುಂದಲ ದಾರಿ ನಿಚ್ಚಳವಾಗಿ ಕಾಣದಿರುವ ಹಾಗೆ, ಹೊಸನಿಲುವುಗಳಿಗೆ ನೆಲೆ ಸಿಕ್ಕದೇ ಇರುವ ಹಾಗೆ ಮಳೆ ಬೀಳುವುದು ಬಿದ್ದು, ಎಷ್ಟೆಲ್ಲ ವಿಚಾರಗಳನ್ನು ಎಬಿಸಿಬಿಡುತ್ತದಲ್ಲ ಅನಿಸಿ ಸೋಜಿಗವೆನಿಸಿತು.

ಈಗಲೂ ಮಳೆ ಬರುತ್ತದೆ. ಮಕ್ಕಳಿಬ್ಬರೂ ಮಾಳಿಗೆ ಹತ್ತಿ ನೆನೆದು ಆಡುವ ಸಂಭ್ರಮವೇ ಹಬ್ಬ. 'ಬೇಡ ಬರ್ರ್‍ಯೋ, ಶೀತವಾದೀತು' ಎಂದು ನಾನು ಗದರಿಕೊಂಡರೆ ಒಡನೆಯೇ ಗುಡುಗುವ ಗಂಡನು, 'ಆ ಹುಡುಗರು ಮಳ್ಯಾಗ ಆಡಿದಂಗ ನಾವು ಆಡಾಕ ಆಗುತ್ತೇನ ಯವ್ವಾ, ನೆಗಡಿ ಆದರ ಆದೀತು ಬಿಡಾ ನಿನ್ನಾ' ಎಂದು ಹೇಳಿ, ಮಕ್ಕಳ ಕುಣಿತಕ್ಕೆ ಶಿಳ್ಳೆ ಹೊಡೆದು ಹಿಗ್ಗುತ್ತಾರೆ. ಮಶಿನಿಗೆ ಹಾಕಿದ ಬಟ್ಟೆಗಳು, ದುಬುಟಿಗಳು ಮಳೆಯ ಸೀಸನ್ನಿನಲ್ಲಿ ಒಣಗುವುದು ಎಷ್ಟು ತ್ರಾಸು, ಅದಕ್ಕೊಂದು ವ್ಯವಸ್ಥೆ ಮಾಡಬೇಕಲ್ಲ, ಗೋಡೆಗಳು ನೆನೆಯುತ್ತಿವೆ, ಏನು ಮಾಡಿ ಸರಿಪಡಿಸಬೇಕು, ಇಷ್ಟು ಮಳೆ, ಚಳಿ ಇರುವಾಗ ದೋಸೆಹಿಟ್ಟು ನೆನೆಯುವುದೇ ಇಲ್ಲ ಇತ್ಯಾದಿ ಸಂಸಾರದೊಳಗಣ ಮನಸು ಪ್ರಾಕ್ಟಿಕಲ್ ಕವಿತೆಗಳನ್ನು ನೇಯತೊಡಗುತ್ತದೆ. ಮಳೆ ಸುರಿಯುವಾಗ ಮನೆಯ ಮುಂಬಾಗಿಲು ತೆರೆದಿಟ್ಟು, ಹೊರಗಿನಿಂದ ಕಾಡಿನಂತೆ ಭಾಸವಾಗುವ ಪರಿಸರವನ್ನು ನೋಡುತ್ತ ಒಂದು ಕಪ್ಪು ಕಾಫಿ ಹೀರಿದರಷ್ಟೇ ಪರಮಸುಖವೆನ್ನುವ ಗೆರೆಯನ್ನು ನಾನೇ ಕೊರೆದುಕೊಂಡಿರುವೆನೇ! ಎಂದಾದರೊಂದು ದಿನ ಈ ಬೆಚ್ಚಗಿದ್ದುಬಿಡುವ ಹೊಸಿಲ ಮೀರಿ, ಮಕ್ಕಳಂತೆ ತೋಯಿಸಿಕೊಂಡು, ಆಡಬಲ್ಲೆನೇ? ಮಳೆಯನ್ನು ಕೇಳಬೇಕೆಂದುಕೊಂಡಿರುವೆ.

## ಛಾಯಾ ಭಗವತಿ

ಬೆಂಗಳೂರಿನ ಖಾಸಗಿ ಪ್ರಕಾಶನ ಸಂಸ್ಥೆಯೊಂದರಲ್ಲಿ ಸಂಪಾದಕಿ. ಮೂಲತಃ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯವರು. 'ಪುಟಾಣಿ ಕೆಂಪು ಶೂ', 'ಚಂದ್ರನಿಗೆ ಟ್ಯಾಟೂ' ಕವನ ಸಂಕಲಗಳು. 'ಹಿಮಗಿರಿಯಾನ' ಪ್ರವಾಸ ಕಥನ, 'ನೀನಿಲ್ಲದೆ ನನಗೇನಿದೆ' ಪ್ರಬಂಧ ಸಂಕಲನ ಮತ್ತು ಥಾಮಸ್ ಹಾರ್ಡಿಯ 'ಅತಂತ್ರ ಜೂಡ್' ಕಾದಂಬರಿಯ ಅನುವಾದ ಪ್ರಕಟವಾಗಿವೆ.